ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾರ ಪ್ರಭಾವದಿಂದಲೂ ಕೂಡ ಬದರಾವಣೆ ಮಾಡ ಬೇಕೆಂಬುದು ಸರ್ಕಾರದ ಇಚ್ಛೆಯಲ್ಲ. ಹೆಚ್ಚು ಜನಗಳಿಗೆ ಹೆಚ್ಚು ಉಪಯೋಗವಾಗಬೇಕು ಎನ್ನುವುದು ಸರ್ಕಾರದ ದೃಷ್ಟಿಯಲ್ಲಿದೆ. ಮಾನ್ಯ ಸದಸ್ಯರು ಹೇಳಿರುವ ವಿಚಾರವನ್ನು ಪರಿಶೀಲನೆ ಮಾಡಿ ಹೆಚ್ಚು ಜನಗಳಿಗೆ ಹೆಚ್ಚು ಪ್ರಯೋಜನವಾಗುವ ರೀತಿಯಲ್ಲಿ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಐದನೇ ಮೈಲಿಯಿಂದ ಹೋದರೆ ಸ್ಟೇಟ್ ಫಾರೆಸ್ಟ್‌ನಲ್ಲಿ ಹೋಗಿ ಬಹಳ ಅರಣ್ಯ ಕೂಡ ಹಾಳಾಗುತ್ತದೆ ಎನ್ನುವುದು ಕೂಡ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎರಡೂ ಅಲೈನ್‌ಮೆಂಟ್ಸ್ ಕೂಡ ಫಾರೆಸ್ಟ್ ಮಧ್ಯದಲ್ಲಿಯೇ ಹೋಗತಕ್ಕದ್ದು. ಇದ್ದುದರಲ್ಲಿ ಯಾವುದರಿಂದ ಹೆಚ್ಚಿನ ಜನಗಳಿಗೆ ಹೆಚ್ಚಿನ ಪ್ರಯೋಜನವಾಗುತ್ತದೆ ಎನ್ನುವುದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

Dalvai Tank in Kandikere Hobli

76. **Sri T. TAREGOWDA** (Kallambella).—

Will the Minister for Public Works and Electricity be pleased to state:—

(*a*) whether the capacity of the 'Dalvai Tank' in Kandikere Hobli has been increased; if not, the reason therefor;

(*b*) the total atchat under the said tank and the villages that are benefited by the tank;

(*c*) whether it has come to the notice of Government that about 300 acres of atchkat lands could be included if its capacity is raised by three feet;

(*d*) the action taken by Government so far to raise its capacity by three feet ?

Sri H. M. CHANNABASAPPA (Minister for Public Works and Electricity).—

(*a*) The Capacity of 'Dalvai Tank' was increased by raising the waste weir be 9".

(*b*) The total atchkat under the tank is 769 acres. Two villages *viz*, Singadahalli in C. N. Halli Taluk and Galikere in Gubbi Taluk are benefited.

(*c*) No.

(*d*) Does not arise in view of reply to clause "C".

ಶ್ರೀ ಟಿ. ತಾರೇಗೌಡ.—ಕಂದಿಕೆರೆ ಹೋಬಳಿ ದಳವಾಯಿ ಕೆರೆ ಏರಿಯನ್ನು 9 ಅಂಗುಲ ಉತ್ತಾವಣೆ ಮಾಡಲಾಗಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಏರಿಯನ್ನು ಎರಡು ಮೂರು ಅಡಿಯಷ್ಟಾದರೂ ಉತ್ತಾವಣೆ ಮಾಡಿದರೆ ಇನ್ನೂ 200–300 ಎಕರೆಗೆ ಅನುಕೂಲವಾಗುತ್ತದೆ ಎಂದು ರೈತರು ಮನವಿಯಲ್ಲಿ ತಿಳಿಸಿದ್ದಾರೆ. ಇದನ್ನು ಇನ್‌ವೆಸ್ಟಿಗೇಟ್ ಮಾಡಿ ಅನುಕೂಲವಾಗುವುದಾದರೆ ಏರಿಯನ್ನು ಎತ್ತರಿಸಿ ಕೊಡುತ್ತೀರಾ ?

†ಶ್ರೀ ಎಚ್. ಎಂ. ಚನ್ನಬಸಪ್ಪ.—200-300 ಎಕರೆಗೆ ಅನುಕೂಲವಾಗುತ್ತದೆ ಎಂದು ಹೇಳುವುದು ಸರಿಯಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ರೈತರು ತೀರಿಕೊಂಡಿರುವುದು ಸರಿಯಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಇವರ ಬಗ್ಗೆ ಅಂದಾಜು ತಯಾರು ಮಾಡಿ, ಅದು ಟಿಕ್ನಿಕಲ್ ಫೀಸಿಬಲ್ ಆಗಿದೆಯೇ ಎನ್ನುವುದನ್ನು ಅದರ ಅಚ್ಚುಕಟ್ಟು ಎಷ್ಟಿದೆ ಎನ್ನುವುದರ ಮೇರೆ ನಿರ್ಧರ ಮಾಡಬೇಕಾಗುತ್ತದೆಯಲ್ಲವೇ ಸ್ವಾಮಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಇರತಕ್ಕ ಅಚ್ಚುಕಟ್ಟಿಗೇ ನೀರಾವರಿ ಸೌಕರ್ಯ ನೀರಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ.

ಶ್ರೀ ಟಿ. ತಾರೇಗೌಡ.—ಅದಕ್ಕೊಸ್ಕರವೇ, ಇನ್‌ವೆಸ್ಟಿಗೇಟ್ ಮಾಡಿ, ಕೆರೆ ಏರಿಯನ್ನು ಉತ್ತಾವಣೆ ಮಾಡುವುದಕ್ಕೆ ಪರ್ಯಾಲೋಚನೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಗುಬ್ಬಿ ತಾಲ್ಲೂಕಿನಲ್ಲಿ ಇದೇ ವ್ಯಾಲಯುಲ್ಲಿ ಬೇರೆ ಕೆರೆಯನ್ನು ಕಟ್ಟತಕ್ಕ ವಿಚಾರ ನಡೆಯುತ್ತಿರುವುದರಿಂದ ಅದರ ಅನುಭವವನ್ನು ನೋಡಿಕೊಂಡು ದಳವಾಯಿ ಕೆರೆ ಬಗ್ಗೆ ವಿಚಾರ ಮಾಡಬೇಕಾಗುತ್ತದೆ.

Famine Relief Works in Yelburga

93. Sri PRABHURAJ PATIL (Yelburga).—

Will the Minister for Revenue be pleased to state :—

(*a*) whether it has come to the notice of the Government that during 1971-72 famine relief works has been taken up in Yelburga Taluk, Raichur District ;

(*b*) the reasons for the stopping of famine relief works in the middle which were started previously though this said taluk is treated as famine striken place during 1972-73 ;

(*c*) whether Government proposed to complete the said work and decide to take up such other works during this period ;

Sri H. M. CHANNABASAPPA (Minister for Public Works) [On behalf of SRI N. HUTCHAMASTHY GOWDA (Minister for Revenue)].—

(*a*) Yes.

(*b*) and (*c*) Directions have been issued to continue the works undertaken during the year 1971-72 till the end of June and complete them.

ಶ್ರೀ ಪ್ರಭುರಾಜ್ ಪಾಟೀಲ್.—ಅಭಾವ ಕಾಮಗಾರಿಗಳಿಗೆ ಎಷ್ಟು ಹಣವನ್ನು ಪೂರೈಕೆ ಮಾಡಿದ್ದಾರೆ ?

†ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಖರ್ಚಾಗಿರತಕ್ಕುದ್ದು 1971-72ರಲ್ಲಿ 2,39,702 ರೂಪಾಯಿ.

ಶ್ರೀ ಪ್ರಭುರಾಜ್ ಪಾಟೀಲ್.—ಮಂಜೂರು ಮಾಡಿರತಕ್ಕ ಹಣ ಎಷ್ಟಿದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—1972-73ನೇ ಸಾಲಿಗೆ ರಾಯಚೂರು ಜಿಲ್ಲೆಗೆ 64 ಸಾವಿರ ರೂಪಾಯಿ, ಫ್ಯಾಮಿನ್‌ನಲ್ಲಿ ಇರಿಗೇಷನ್ನಿಗೆ 15 ಸಾವಿರ ರೂಪಾಯಿ, ನೀರಾವರಿ ಬಾವಿಗಳಿಗೆ 50 ಸಾವಿರ ರೂಪಾಯಿ ಈ ಪ್ರಕಾರ ಕೊಟ್ಟಿದೆ.